ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 277 ಸೆನೆನಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:6.12.2018

1325
20/12/2018

## ಸುತ್ತೋಲೆ

ವಿಷಯ: ಸಿವಿಲ್ ಅಪೀಲ್ ಸಂಖ್ಯೆ: 2368/2011– ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಮುಂಬಡ್ತಿ/ಹಿಂಬಡ್ತಿ ಹೊಂದಿರುವವರಿಗೆ ಆರ್ಥಿಕ ಸೌಲಭ್ಯ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಸೇಜೇನಿ 2017 ದಿನಾಂಕ: 06.05.2017.
2. ಸುತ್ತೋಲೆ ಸಂಖ್ಯೆ: ಡಿಪಿಎಆರ್ 277 ಎಸ್ಆರ್ಆರ್ 018 ದಿನಾಂಕ: 08.06.2018.
3. ಸುತ್ತೋಲೆ ಸಂಖ್ಯೆ: ಡಿಪಿಎಆರ್ 442 ಸೇಜೇನಿ 2018 ದಿನಾಂಕ: 08.06.2018.
4. ಸುತ್ತೋಲೆ ಸಂಖ್ಯೆ: ಸಿಆಸುಇ 277 ಸೇಜೇನಿ 2018 ದಿನಾಂಕ: 06.08.2018.
5. ಸುತ್ತೋಲೆ ಸಂಖ್ಯೆ: ಡಿಪಿಎಆರ್ 277 ಎಸ್ಆರ್ಆರ್ 2018 ದಿನಾಂಕ: 18.08.2018.
6. ಸುತ್ತೋಲೆ ಸಂಖ್ಯೆ: ಡಿಪಿಎಆರ್ 277 ಎಸ್ಆರ್ಆರ್ 2018 ದಿನಾಂಕ: 01.09.2018.

******

1. ಸಿವಿಲ್ ಅಪೀಲ್ ಸಂಖ್ಯೆ: 2368/2011– ಶ್ರೀ ಬಿ.ಕೆ.ಪವಿತ್ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನ ತೀರ್ಪಿನನ್ವಯ ಮುಂಬಡ್ತಿ/ ಹಿಂಬಡ್ತಿಗೊಳಗಾಗಿ ವಯೋನಿವೃತ್ತಿ ಹೊಂದಿರುವ ಅಧಿಕಾರಿ/ನೌಕರರಿಗೆ ವೇತನ/ನಿವೃತ್ತಿ ವೇತನವನ್ನು ನಿಗದಿಪಡಿಸುವ ಸಂಬಂಧ ಉಲ್ಲೇಖ (1) ರಿಂದ (6)ರವರೆಗಿನ ಸುತ್ತೋಲೆಗಳಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿರುತ್ತದೆ.

2. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:9.2.2017ರಂದು ನೀಡಿರುವ ತೀರ್ಪಿನನ್ವಯ ಹಿಂಬಡ್ತಿ ಹೊಂದಿ ಸೇವೆಯಲ್ಲಿರುವ ನೌಕರರಿಗೆ ನಿಗದಿಪಡಿಸಬೇಕಾದ ವಾರ್ಷಿಕ ವೇತನ ಬಡ್ತಿ / ಕಾಲಿಕ ವೇತನ ಬಡ್ತಿ / ಸ್ಥಗಿತ ವೇತನ ಬಡ್ತಿ/ ಗಳಿಕೆ ರಜೆ ನಗದೀಕರಣ/ ಪ್ರಯಾಣ ಭತ್ಯೆ/ದಿನಭತ್ಯೆ (ಟಿ.ಎ./ಡಿ.ಎ.), ಕನ್ವೇಯನ್ಸ್ ಅಲೋಯನ್ಸ್, ಮನೆಬಾಡಿಗೆ ಭತ್ಯೆ

(ಹೆಚ್.ಆರ್.ಎ.), ನಗರಪರಿಹಾರ ಭತ್ಯೆ (ಸಿಸಿಎ) ಇತ್ಯಾದಿಗಳನ್ನು ನಿಗದಿಗೊಳಿಸಿ ಬಿಡುಗಡೆ ಮಾಡುವ ಬಗ್ಗೆ ಮತ್ತು ಹಿಂಬಡ್ತಿ ಹೊಂದಿ ಸೇವೆಯಿಂದ ನಿವೃತ್ತಿ ಹೊಂದಿರುವ ನೌಕರರಿಗೆ ಹಾಗೂ ನಿವೃತ್ತಿ ಹೊಂದಿದ ಸಾಮಾನ್ಯ ವರ್ಗದವರಿಗೆ ಪಾವತಿಸಬೇಕಾದ ನಿವೃತ್ತಿ ಸೌಲಭ್ಯಗಳು ಅಂದರೆ ಡಿ.ಸಿ.ಆರ್.ಜಿ., ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣ, Commutation of Pension (ಸಿ.ವಿ.ಪಿ.) ಮತ್ತು ಕುಟುಂಬ ವೇತನ ಇತ್ಯಾದಿಗಳನ್ನು ನಿಗದಿಗೊಳಿಸಿ ಬಿಡುಗಡೆ ಮಾಡುವ ಬಗ್ಗೆ <u>ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ:-</u>

**ಅ) <u>ಹಿಂಬಡ್ತಿ ಹೊಂದಿ ಸೇವೆಯಲ್ಲಿ ಇರುವ ನೌಕರರ ಪ್ರಕರಣಗಳು:</u>**

(1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಹಿಂಬಡ್ತಿ/ಮುಂಬಡ್ತಿ ಹೊಂದಿದ ನೌಕರರ ಪ್ರಕರಣಗಳಲ್ಲಿ ವೇತನ ನಿಗದಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ನಿಗದಿಪಡಿಸುವ ಕುರಿತಂತೆ ದಿನಾಂಕ: 8.6.2018ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 277 ಸೇನೇನಿ 2018 ಹಾಗೂ 18.8.2018ರ ಸುತ್ತೋಲೆಯ ಸಂಖ್ಯೆ: ಸಿಆಸುಇ 277 ಸೇನೇನಿ 2018ರಲ್ಲಿನ ಸೂಚನೆಗಳನ್ನೇ ಪಾಲಿಸುವುದು.

(2) ದಿನಾಂಕ: 18.8.2018ರ ಸುತ್ತೋಲೆಯನ್ವಯ ಹಿಂಬಡ್ತಿ ಪೂರ್ವದಲ್ಲಿ ನಿರ್ವಹಿಸುತ್ತಿದ್ದ ಹುದ್ದೆಯ ವೇತನವನ್ನು ತಾತ್ಕಾಲಿಕ ರಕ್ಷಣೆಯೊಂದಿಗೆ ಅಂದರೆ ಅಡ್-ಹಾಕ್ ಆಧಾರದಲ್ಲಿ ಮುಂದುವರೆಸುತ್ತಿರುವುದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 53(ಡಿ)ರನ್ವಯ ಮೂಲತಃ ಕರ್ತವ್ಯ ನಿರ್ವಹಿಸುವ ಹುದ್ದೆಯಲ್ಲಿ ಸಲ್ಲಿಸುವ ಸೇವೆಯು ವಾರ್ಷಿಕ ವೇತನ ಬಡ್ತಿ ಉದ್ದೇಶಕ್ಕಾಗಿ ಪರಿಗಣಿತವಾಗತಕ್ಕದ್ದು (All duty in a post on a time scale of pay counts for increment in that time scale). ಹಿಂಬಡ್ತಿ ಹುದ್ದೆಯಲ್ಲಿ ವಾರ್ಷಿಕ ವೇತನ ಬಡ್ತಿ ಗಳಿಸಿದ್ದರೆ ಪಡೆಯಬಹುದಾದ ವೇತನ ಹಂತಕ್ಕಿಂತ ಹೆಚ್ಚಿನ ಹಂತದಲ್ಲಿ ವೇತನವನ್ನು ರಕ್ಷಣೆಯೊಂದಿಗೆ ಪರಿಗಣಿಸುವುದರಿಂದ ಅದೇ ನಿಯಮಾವಳಿಯ ನಿಯಮ 53(ಡಿ) ಯಲ್ಲಿನ ತತ್ವದಂತೆ ಹಿಂಬಡ್ತಿ ಹೊಂದಿದ ಕೆಳಗಿನ ಹುದ್ದೆಯಲ್ಲಿ ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಯನ್ನು ಪರಿಗಣಿಸತಕ್ಕದ್ದು. **<u>ತಾತ್ಕಾಲಿಕವಾಗಿ ಪರಿಗಣಿಸಿರುವ ಅಡ್-ಹಾಕ್ ವೇತನದ ಆಧಾರದ ಮೇಲೆ ಮುಂದಿನ ವಾರ್ಷಿಕ ವೇತನಬಡ್ತಿಯ ಬಿಡುಗಡೆಯನ್ನು ಪರಿಗಣಿಸತಕ್ಕದ್ದಲ್ಲ.</u>**

(3) ಗಳಿಕೆ ರಜೆ ನಗದೀಕರಣ, ಹೆಚ್.ಆರ್.ಎ. ಸಿ.ಸಿ.ಎ. ಇವುಗಳನ್ನು ಅಡ್-ಹಾಕ್ ವೇತನದ ಆಧಾರದ ಮೇಲೆ ಪರಿಗಣಿಸತಕ್ಕದ್ದು;

(4) ಪ್ರಯಾಣ ಭತ್ಯೆ (ಟಿ.ಎ), ನಗರ ಪರಿಹಾರ ಭತ್ಯೆ (ಡಿ.ಎ) ಮತ್ತು ಇತರೆ ಕನ್ವೇಯನ್ಸ್ ಅಲೋಯನ್ಸ್ ಗಳನ್ನು ವಾಸ್ತವಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗೆ ಸಂವಾದಿಯಾಗಿ ಲಭ್ಯವಾಗುವ ಪ್ರಮಾಣಾನುಸಾರ ನಿಗದಿಗೊಳಿಸತಕ್ಕದ್ದು;

[illegible]
ಸರ್ಕಾರದ [illegible] ಕಾರ್ಯದರ್ಶಿ
[illegible]

...3/-

(5) ಕಾಲಿಕ ವೇತನ ಬಡ್ತಿ (ಕಾಲಬದ್ಧ ಮುಂಬಡ್ತಿ ವೇತನ) ವೈಯಕ್ತಿಕ ಮುಂಬಡ್ತಿಯಾಗಿದ್ದು ಇದು ಪದೋನ್ನತಿಯಂತೆಯೇ ಪರಿಗಣಿತವಾಗುತ್ತದೆ. ಅನ್ಯಥ ಯಾವ ಹುದ್ದೆಯಲ್ಲಿ ಯಾವ ದಿನಾಂಕದಂದು ಸದರಿ ಮುಂಬಡ್ತಿ ಸೌಲಭ್ಯಕ್ಕೆ ಅರ್ಹರಾಗುತ್ತಾರೆ ಎಂದು ಪರಿಗಣಿತವಾಗುವ ಸೇವಾ ಹಿರಿತನದ ಅಂಶವು ನ್ಯಾಯಾಲಯದಲ್ಲಿ ಬಾಕಿಯಿರುವುದರಿಂದ **ಕಾಲಿಕ ವೇತನ ಬಡ್ತಿ (ಕಾಲಬದ್ಧ ಮುಂಬಡ್ತಿ ವೇತನ) ಮತ್ತು ಸ್ಥಗಿತ ವೇತನ ಮುಂಬಡ್ತಿ ಪ್ರಸ್ತಾವನೆಯನ್ನು ಪರಿಗಣಿಸತಕ್ಕದ್ದಲ್ಲ;**

**ಆ) ಹಿಂಬಡ್ತಿ ಹೊಂದಿ ಸೇವೆಯಿಂದ ನಿವೃತ್ತಿ ಹೊಂದಿರುವ ನೌಕರರ ಪ್ರಕರಣಗಳು:**

(1) ಚಾಲ್ತಿಯಲ್ಲಿರುವ ನಿಯಮಾನುಸಾರ ನಿವೃತ್ತಿ ವೇತನ, ಉಪದಾನ, ಲಭ್ಯವಿದ್ದಲ್ಲಿ ನಿವೃತ್ತಿ ಸಂದರ್ಭದಲ್ಲಿನ ಗಳಿಕೆ ರಜೆ ನಗದೀಕರಣ, ಕುಟುಂಬ ವೇತನ ಅಂಶಗಳನ್ನು ನಿವೃತ್ತಿ / ಮರಣ ಹೊಂದಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಇತ್ಯರ್ಥಪಡಿಸತಕ್ಕದ್ದು ಮತ್ತು ನೌಕರನು ವಿಳಂಬಕ್ಕಾಗಿ ಬಾಧ್ಯನಲ್ಲದಿದ್ದ ಪಕ್ಷದಲ್ಲಿ ಮೂರು ತಿಂಗಳ ಅವಧಿಯು ಮುಗಿದ ದಿನದಿಂದ ಪ್ರಾರಂಭಿಸಿ ಇತ್ಯರ್ಥಗೊಳಿಸುವ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಶೇಕಡ 8ರ ಬಡ್ಡಿಯನ್ನು ಪರಿಗಣಿಸಿ ಪಾವತಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿವೃತ್ತಿ ಹೊಂದಿರುವ ಅಧಿಕಾರಿ/ ನೌಕರರ ಪ್ರಕರಣಗಳಲ್ಲಿ ಹಿಂಬಡ್ತಿ ಹೊಂದುವ ಹುದ್ದೆಯಲ್ಲಿ ವಾಸ್ತವಿಕವಾಗಿ ನಿಯಮಾನುಸಾರ ಅರ್ಹವಾಗುವ ವೇತನವನ್ನು ಕಾಲ್ಪನಿಕವಾಗಿ ಪರಿಗಣಿಸಿ, ಅದರನುಸಾರದ ನಿವೃತ್ತಿ ವೇತನ, ಗಳಿಕೆ ರಜೆ ನಗದೀಕರಣ/ಸೇವಾ ಉಪಾದಾನ/ಪರಿವರ್ತಿಕ ಪಿಂಚಣಿ ಸೌಲಭ್ಯಗಳನ್ನು ಪ್ರಥಮ ಹಂತದಲ್ಲಿ ಕೂಡಲೇ ಇತ್ಯರ್ಥಪಡಿಸತಕ್ಕದ್ದು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಂತಿಮ ತೀರ್ಮಾನ ನೀಡಿದ ನಂತರದಲ್ಲಿ ಸರ್ಕಾರವು ಹೆಚ್ಚುವರಿ ಪಾವತಿಗೆ ಬಾಧ್ಯವಾಗುವ ಸಂದರ್ಭಗಳು ಉದ್ಭವಿಸಿದಲ್ಲಿ, ವ್ಯತ್ಯಾಸದ ಮೊತ್ತವನ್ನು ಸೂಕ್ತ ನಿಯಮಾನುಸಾರದ ಬಡ್ಡಿಯೊಂದಿಗೆ ಪಾವತಿಸಲು ಪರಿಶೀಲಿಸತಕ್ಕದ್ದು.

**ಇ) ಪರಿಷ್ಕೃತ ಜೇಷ್ಠತಾ ಪಟ್ಟಿಯನ್ವಯ ಮುಂಬಡ್ತಿ ಹೊಂದಿ ನಿವೃತ್ತರಾದ ನೌಕರರ ಪ್ರಕರಣಗಳಲ್ಲಿ:**

(1) ಚಾಲ್ತಿಯಲ್ಲಿರುವ ನಿಯಮಾನುಸಾರ ನಿವೃತ್ತಿ ವೇತನ, ಉಪದಾನ, ಲಭ್ಯವಿದ್ದಲ್ಲಿ ನಿವೃತ್ತಿ ಸಂದರ್ಭದಲ್ಲಿನ ಗಳಿಕೆ ರಜೆ ನಗದೀಕರಣ, ಕುಟುಂಬ ವೇತನ ಅಂಶಗಳನ್ನು ನಿವೃತ್ತಿ / ಮರಣ ಹೊಂದಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಇತ್ಯರ್ಥಪಡಿಸತಕ್ಕದ್ದು ಮತ್ತು ನೌಕರನು ವಿಳಂಬಕ್ಕಾಗಿ ಬಾಧ್ಯನಲ್ಲದಿದ್ದ ಪಕ್ಷದಲ್ಲಿ ಮೂರು ತಿಂಗಳ ಅವಧಿಯು ಮುಗಿದ ದಿನದಿಂದ ಪ್ರಾರಂಭಿಸಿ

..4/-

ಇತ್ಯರ್ಥಗೊಳಿಸುವ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಶೇಕಡ 8ರ ಬಡ್ಡಿಯನ್ನು ಪರಿಗಣಿಸಿ ಪಾವತಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮುಂಬಡ್ತಿ ಹೊಂದಿ ನಿವೃತ್ತಿ ಹೊಂದಿರುವ ಅಧಿಕಾರಿ/ ನೌಕರರ ಪ್ರಕರಣಗಳಲ್ಲಿ ಮುಂಬಡ್ತಿ ಹೊಂದುವ ಪೂರ್ವದ ಹುದ್ದೆಯಲ್ಲಿ ವಾಸ್ತವಿಕವಾಗಿ ಪಾವತಿಸಲಾಗುತ್ತಿದ್ದ ವೇತನವನ್ನು ಕಾಲ್ಪನಿಕವಾಗಿ ಪರಿಗಣಿಸಿ, ಅದರನುಸಾರದ ನಿವೃತ್ತಿ ವೇತನ, ಗಳಿಕೆ ರಜೆ ನಗದೀಕರಣ/ಸೇವಾ ಉಪಾದಾನ/ಪರಿವರ್ತಿಕ ಪಿಂಚಣಿ ಸೌಲಭ್ಯಗಳನ್ನು ಪ್ರಥಮ ಹಂತದಲ್ಲಿ ಕೂಡಲೇ ಇತ್ಯರ್ಥಪಡಿಸತಕ್ಕದ್ದು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಂತಿಮ ತೀರ್ಮಾನ ನೀಡಿದ ನಂತರದಲ್ಲಿ ಸರ್ಕಾರವು ಹೆಚ್ಚುವರಿ ಪಾವತಿಗೆ ಬಾಧ್ಯವಾಗುವ ಸಂದರ್ಭಗಳು ಉದ್ಭವಿಸಿದಲ್ಲಿ, ವ್ಯತ್ಯಾಸದ ಮೊತ್ತವನ್ನು ಸೂಕ್ತ ನಿಯಮಾನುಸಾರದ ಬಡ್ಡಿಯೊಂದಿಗೆ ಪಾವತಿಸಲು ಪರಿಶೀಲಿಸತಕ್ಕದ್ದು.

3. ದಿನಾಂಕ: 1.9.2018ರ ಸುತ್ತೋಲೆ ಸಂಖ್ಯೆ: ಸಿಆಸುಇ 182 ಸೇನೇನಿ 2018ರಲ್ಲಿ ನೀಡಿರುವ ಸೂಚನೆಗಳನ್ವಯ ಅಡ್-ಹಾಕ್ ವೇತನವನ್ನು ಬಿಡುಗಡೆ ಮಾಡಲು ಈ ಕೆಳಕಂಡ ನಮೂನೆಯಲ್ಲಿ **under taking**ನ್ನು ಪಡೆಯತಕ್ಕದ್ದು:-

**ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರು ನೀಡಬೇಕಾದ ಘೋಷಣಾ ಪತ್ರ**

ನಾನು ಈ ಕೆಳಕಂಡಂತೆ ಪ್ರಮಾಣೀಕರಿಸುತ್ತೇನೆ:

(1) ಶ್ರೀ ಬಿ.ಕೆ.ಪವಿತ್ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಸಕ್ಷಮ ಪ್ರಾಧಿಕಾರವು ಮುಂಬಡ್ತಿ/ಹಿಂಬಡ್ತಿ ಆದೇಶಗಳ ಆಧಾರದ ಮೇಲೆ ನಿಗದಿಪಡಿಸಿರುವ ತಾತ್ಕಾಲಿಕ ವೇತನದ ಆಧಾರದ ಮೇಲೆ ನಿಗದಿಪಡಿಸಿರುವ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಡೆಯಲು ಒಪ್ಪಿರುತ್ತೇನೆ ಮತ್ತು ಸರ್ಕಾರವು ಮುಂದೆ ಕೈಗೊಳ್ಳುವ ಅಂತಿಮ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ/ ಬದ್ಧಳಾಗಿರುತ್ತೇನೆ.

(2) ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಪು ಮತ್ತು ಅದರಂತೆ ಸರ್ಕಾರ ಕೈಗೊಳ್ಳುವ ಅಂತಿಮ ನಿರ್ಧಾರಕ್ಕೆ ಒಳಪಟ್ಟು, ಒಂದು ವೇಳೆ ಹೆಚ್ಚುವರಿ ಮೊತ್ತವನ್ನು ಪಡೆದಿದ್ದಲ್ಲಿ ಸದರಿ ಮೊತ್ತವನ್ನು ಮರುಪಾವತಿಸುವುದಾಗಿ ಪ್ರಮಾಣೀಕರಿಸುತ್ತೇನೆ.

ದಿನಾಂಕ: ಪಿಂಚಣಿದಾರ/ಕುಟುಂಬ ಪಿಂಚಣಿದಾರರ ಸಹಿ

ಸ್ಥಳ: ಹೆಸರು:

4. ಈ ಸೂಚನೆಗಳು ಎಲ್ಲಾ ಸ್ವಾಯತ್ತ ಸಂಸ್ಥೆಗಳು/ ಸ್ಥಳೀಯ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಸಾರ್ವಜನಿಕ ಉದ್ದಿಮೆ/ ಆಯೋಗ/ ನಿಗಮ/ ಮಂಡಳಿಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಗಳಿಗೂ ಅನ್ವಯವಾಗುತ್ತದೆ.

5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು ತಮ್ಮ ಆಡಳಿತ ವ್ಯಾಪ್ತಿಗೊಳಪಡುವ ಎಲ್ಲಾ ಸ್ವಾಯತ್ತ ಸಂಸ್ಥೆಗಳು/ ಸ್ಥಳೀಯ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಸಾರ್ವಜನಿಕ ಉದ್ದಿಮೆ/ ಆಯೋಗ/ ನಿಗಮ/ ಮಂಡಳಿಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಗಳಿಗೆ ಈ ಕುರಿತು ಕೂಡಲೇ ಸೂಚನೆ ನೀಡುವಂತೆ ತಿಳಿಸಲಾಗಿದೆ.

6/12/18
(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
ಸಿ.ಆ.ಸು.ಇ. (ಸೇವಾ ನಿಯಮಗಳು-1)

**ಎಸ್.ಆರ್. ಬಸವರಾಜಯ್ಯ**
**ಸರ್ಕಾರದ ಉಪ ಕಾರ್ಯದರ್ಶಿ**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**
**( ಸೇವಾ ನಿಯಮಗಳು-1 )**

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ:12:ಜೇಪಪ:ಬಸ್ಥಾವಿ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 02-01-2019

ಮೇಲ್ಕಂಡ ಸರ್ಕಾರದ ಸುತ್ತೋಲೆಯನ್ನು ಈ ಕೆಳಕಂಡವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ :**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)

3/1/19

**ಪ್ರತಿ :**

1. ಗೆಜೆಟೆಡ್ ಮ್ಯಾನೇಜರ್/ಅಧೀಕ್ಷಕರು, ಹಣ ಮತ್ತು ಪಾವತಿ ವಿಭಾಗ, ಸೇವಾ ವಿಭಾಗ ಹಾಗೂ ಪಿಂಚಣಿ ವಿಭಾಗಗಳಿಗೆ – ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಕಛೇರಿ ಪ್ರತಿ.